**ಓ.ಎಸ್. ನಂಃ 72/2021**

**ಪಿ. ಡಬ್ಲ್ಯೂಃ 1**

**ದಿನಾಂಕ 14.11.2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲುಃ ಪ್ರತಿವಾದಿಯ ಪರ ಃ ಶ್ರೀ.ಸಿ.ಎಲ್.ಎಂ. ವಕೀಲರಿಂದಃ</u>**

1. ನಾನು ಎಂ.ಎಸ್.ಸಿ. ಪದವೀದರಳಾಗಿದ್ದು, ನಾನು ಪ್ರೌಢ ಶಾಲಾ ಶಿಕ್ಷಕಿಯಾಗಿ 10 ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. ನನ್ನ ತಂದೆಗೆ ಒಟ್ಟು 4 ಜನ ಮಕ್ಕಳು. ಅವರು ಹೆಸರು 2 ನೇ ಪ್ರತಿವಾದಿಯಾದ ಹಂಸ, 3 ನೇ ಪ್ರತಿವಾದಿಯಾದ ಚೈತ್ರಾ, 4 ನೇ ಪ್ರತಿವಾದಿಯಾದ ಯೋಗೇಶ್ ಮತ್ತು ನಾನು. 2 ನೇ ಪ್ರತಿವಾದಿ ಪದವೀದರಳಾಗಿರುತ್ತಾರೆ. 3 ನೇ ಪ್ರತಿವಾದಿ ಇಂಜಿನಿಯರಿಂಗ್ ವಿದ್ಯಾಭ್ಯಾಸವನ್ನು ಮಾಡಿರುತ್ತಾರೆ. 1 ನೇ ಪ್ರತಿವಾದಿ ನನ್ನ ತಂದೆ. ನಾನು ಮತ್ತು 1 ನೇ ಪ್ರತಿವಾದಿ ಅನೋನ್ಯವಾಗಿದ್ದೇವೆ ಎಂದರೆ ಸರಿ. ನಾನು ಮತ್ತು ಪ್ರತಿವಾದಿ ಸಂಖ್ಯೆ 2 ಮತ್ತು 3 ರವರು ಅನೋನ್ಯವಾಗಿರುವುದಿಲ್ಲ.

2. 1 ನೇ ಪ್ರತಿವಾದಿ ಈ ದಿನ ನ್ಯಾಯಾಲಯಕ್ಕೆ ಬಂದಿರುತ್ತಾರೆ ಹಾಗೂ ಅವರು ಈ ದಿನ ನನ್ನೊಂದಿಗೆ ಮಾತನಾಡಿರುತ್ತಾರೆ. 1 ನೇ ಪ್ರತಿವಾದಿ ಮತ್ತು ಅವರ ಸಹೋದರರ ಮಧ್ಯೆ ಅವರ ಕುಟುಂಬದ ಮತ್ತು ಪಿತ್ರಾರ್ಜಿತ ಆಸ್ತಿಗಳಲ್ಲಿ ಈಗಾಗಲೇ ಪಾಲು ವಿಭಜನೆ ಆಗಿರುತ್ತದೆ ಎಂದರೆ ಸರಿ. ಸದರಿ ಪಾಲು ವಿಭಜನೆಯಲ್ಲಿ ಯಾವೆಲ್ಲಾ ಆಸ್ತಿಗಳು 1 ನೇ ಪ್ರತಿವಾದಿಯ ಹಿಸ್ಸೆಗೆ ಹೋಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಯಾವೆಲ್ಲಾ ಆಸ್ತಿಗಳು 1 ನೇ ಪ್ರತಿವಾದಿಯ ಸ್ವರ್ಯಾಜಿತ ಹಾಗೂ ಪಿತ್ರಾರ್ಜಿತ ಆಸ್ತಿಗಳು ಮತ್ತು ಯಾವೆಲ್ಲಾ ಆಸ್ತಿಗಳು ನನ್ನ ತಾಯಿಯ ಸ್ವರ್ಯಾಜಿತ ಹಾಗೂ ಪಿತ್ರಾರ್ಜಿತ ಆಸ್ತಿಗಳಾಗಿರುತ್ತವೆ ಎಂದು ಪ್ರತ್ಯೇಕವಾಗಿ ನನಗೆ ಹೇಳಲಾಗುವುದಿಲ್ಲ.

3. 1 ನೇ ಪ್ರತಿವಾದಿಯು ಸಕ್ಕರೆ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. 2011 ರಲ್ಲಿ 1 ನೇ ಪ್ರತಿವಾದಿಯು ತಮ್ಮ ಕೆಲಸದಿಂದ ನಿವೃತ್ತಿ ಹೊಂದಿರುತ್ತಾರೆ. 1 ನೇ ಪ್ರತಿವಾದಿಯೇ ನನ್ನ ಮತ್ತು 2 ರಿಂದ 4 ನೇ ಪ್ರತಿವಾದಿಯರಿಗೆ ವಿದ್ಯಾಭ್ಯಾಸ

ಕೊಟ್ಟಿರುತ್ತಾರೆ ಎಂದರೆ ಸರಿ. 2014 ರಲ್ಲಿ 1 ನೇ ಪ್ರತಿವಾದಿ ಮತ್ತು ನಮಗೆ ಆರ್ಥಿಕ ಸಂಕಷ್ಟವಿತ್ತು ಎಂದರೆ ಸರಿ. 2 ನೇ ಪ್ರತಿವಾದಿಯ ವಿವಾಹವು 2014 ರಲ್ಲಿಯೇ ಆಗಿರುತ್ತದೆ.

4. ದಾವಾ ಐಟಂ ನಂ.1 ರ ಆಸ್ತಿಯ ಪೈಕಿ 21 ಗುಂಟೆ ಜಮೀನನ್ನು ದಿನಾಂಕ 02.10.2000 ರಂದು 1 ನೇ ಪ್ರತಿವಾದಿ ಸರೋಜಮ್ಮರವರಿಂದ ಖರೀದಿಸಿರುತ್ತಾರೆ ಎಂದರೆ ಸರಿ. ದಾವಾ ಐಟಂ ನಂ.6 ರ ಆಸ್ತಿಯ ಪೈಕಿ 25 ಗುಂಟೆ ಜಮೀನನ್ನು ದಿನಾಂಕ 09.03.2000 ರಂದು ಎ.ಆರ್.ಪ್ರಕಾಶ್ ರವರಿಂದ ನನ್ನ ತಾಯಿಯಾದ ವಿಜಯಲಕ್ಷ್ಮೀ ರವರು ಖರೀದಿಸಿರುತ್ತಾರೆ ಎಂದರೆ ಸರಿ. ದಾವಾ ಐಟಂ ನಂ.6 ರ ಆಸ್ತಿಯ ಪೈಕಿ 25 ಗುಂಟೆ ಜಮೀನಿನ ಕ್ರಯ ಪತ್ರದ ದೃಢಿಕೃತ ನಕಲನ್ನು ಸಾಕ್ಷಿಗೆ ತೋರಿಸಿದ್ದು, ಸಾಕ್ಷಿಯು ಸದರಿ ದಾಖಲೆಯನ್ನು ನೋಡಿ ಒಪ್ಪಿದ ಕಾರಣ ಅದನ್ನು ನಿಡಿ.1 ಎಂದು ಗುರುತಿಸಲಾಯಿತು.

**ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**